**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 218 ಕೆ.ಒ.ಎಲ್ 90

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 27ನೇ ಜುಲೈ 1990.

**ಅಧಿಕೃತ ಜ್ಞಾಪನ**

ವಿಷಯ :- ಕಛೇರಿಗಳಲ್ಲಿ ಕನ್ನಡವನ್ನು ಪೂರ್ಣ ಜಾರಿಗೊಳಿಸುವ ಬಗ್ಗೆ.

ಕರ್ನಾಟಕ ರಾಜ ಭಾಷಾ ಅಧಿನಿಯಮ, 1963ರ ಪ್ರಕಾರ ಕನ್ನಡವು ರಾಜ್ಯದ ಆಡಳಿತ ಭಾಷೆ, ಕೇಂದ್ರ ಸರ್ಕಾರದ ಕಛೇರಿಗಳು ಹೊರ ರಾಜ್ಯ ಮತ್ತು ನ್ಯಾಯಾಲಯಗಳೊಡನೆ ನಡೆಸಬಹುದಾದ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ ಉಳಿದೆಲ್ಲ ಪತ್ರ ವ್ಯವಹಾರಗಳು ಕನ್ನಡದಲ್ಲಿರಬೇಕಾಗುತ್ತದೆ. ವಿಭಾಗ ಮತ್ತು ಜಿಲ್ಲೆಯಲ್ಲಿ ಕಛೇರಿಗಳು ಸರ್ಕಾರದ ಭಾಷಾ ನೀತಿಯನ್ನು ಪೂರ್ಣ ಅನುಷ್ಠಾನಕ್ಕೆ ತರುವಲ್ಲಿ ಹಿಂದೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಚಿವಾಲಯ ಇಲಾಖೆಗಳಲ್ಲಿ ಹಾಗೂ ಕೆಲವು ಇಲಾಖಾ ಮುಖ್ಯಸ್ಥರ ಕಚೇರಿಗಳಲ್ಲಿ ನಿರೀಕ್ಷಿಸಿದ ಪ್ರಮಾಣದಲ್ಲಿ ಕನ್ನಡ ಬಳಕೆಯಾಗುತ್ತಿಲ್ಲ. ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿದೆ.

2. ಆದ್ದರಿಂದ,

(ಅ) ಕನ್ನಡ ಅನುಷ್ಠಾನ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶಗಳನ್ನು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(ಆ) ಕೇಂದ್ರ ಸರ್ಕಾರದ ಕಛೇರಿಗಳು, ಹೊರ ರಾಜ್ಯ ಮತ್ತು ನ್ಯಾಯಾಲಯಗಳೊಡನೆ ನಡೆಸಬಹುದಾದ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ ಉಳಿದೆಲ್ಲ ಪತ್ರ ವ್ಯವಹಾರಗಳು ನೂರಕ್ಕೆ ನೂರರಷ್ಟು ಕನ್ನಡದಲ್ಲೇ ಇರತಕ್ಕದೆಂದು ಈ ಮೂಲಕ ಆದೇಶಿಸಲಾಗಿದೆ.

3. ಯಾವುದೇ ಪತ್ರ ವ್ಯವಹಾರ/ಕಡತ ಕನ್ನಡದಲ್ಲಿರಬಹುದಾಗಿದ್ದರೂ ಇಂಗ್ಲೀಷ್‌ನಲ್ಲಿ ನಿರ್ವಹಿಸಿರುವುದು ಅಥವಾ ಕನ್ನಡ ಅನುಷ್ಠಾನ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶಗಳನ್ನು

ಅನುಸರಿಸುವುದು ಗಮನಕ್ಕೆ ಬಂದರೆ ಸಂಬಂಧಿಸಿದ ಅಧಿಕಾರಿ/ನೌಕರರನ್ನು ಸರ್ಕಾರಿ ಆದೇಶಗಳ ಉಲ್ಲಂಘನೆ ಮತ್ತು ಭಾಷಾ ನೀತಿಯನ್ನು ಜಾರಿಗೊಳಿಸುವಲ್ಲಿ ತೋರಿರುವ ತಾತ್ಸಾರವೆಂದು ಪರಿಗಣಿಸಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ಎಚ್ಚರಿಸಲಾಗಿದೆ.

4. ರಾಜ್ಯ ಸರ್ಕಾರದಿಂದ ರಚಿತವಾದ ಹಾಗೂ ರಾಜ್ಯ ಸರ್ಕಾರದಿಂದ ಅನುದಾನ ಅಥವಾ ಆರ್ಥಿಕ ನೆರವು ಪಡೆಯುತ್ತಿರುವ ಸ್ಥಳೀಯ ಸಂಸ್ಥೆಗಳೂ, ಕಾರ್ಪೊರೇಷನ್‌ಗಳೂ, ಮಂಡಲಿಗಳೂ, ಆಡಳಿತ ಸಂಸ್ಥೆಗಳೂ, ಸರ್ಕಾರಿ ಉದ್ಯಮ ಸಂಸ್ಥೆಗಳೂ ಹಾಗು ರಾಜ್ಯದ ವಿಶ್ವವಿದ್ಯಾಲಯಗಳೂ ಕನ್ನಡ ಅನುಷ್ಠಾನ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶಗಳನ್ನು/ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಎಂದು ಈ ಮೂಲಕ ಮತ್ತೊಮ್ಮೆ ಕೋರಲಾಗಿದೆ.

ಸಹಿ/-

**(ಎಂ. ಶಂಕರನಾರಾಯಣನ್)**

ಸರ್ಕಾರದ ಮುಖ್ಯ ಕಾರ್ಯದರ್ಶಿ,

ಕರ್ನಾಟಕ ಸರ್ಕಾರ.